


ಪುರಾಣ ಕಥನಗಳನ್ನು ಹುಡುಕಿ ಓದಬೇಕು!

ಕಲೆಯೊಂದಿಗಿನ ತಮ್ಮ ಅನುಬಂಧದ ಬಗ್ಗೆ ಸ್ವತಃ ಎಂ.ಟಿ.ವಿ. ಆಚಾರ್ಯರೇ ಬರೆದಿರುವ 'ಆರ್ಟ್ ಮತ್ತು ಐ' ಬರಹ (ಅನುವಾದ: ಎ. ಶಿವಪ್ರಸಾದ್) ಕೃತಿಯ ಎರಡನೇ ಭಾಗದಲ್ಲಿದೆ. ಕಲಾವಿದರಾಗಿ ಆಚಾರ್ಯರ ನಂಬಿಕೆಗಳನ್ನು ಅರಿಯಲು ಹಾಗೂ ಅವರ ಕಲಾಸಿದ್ಧಾಂತವನ್ನು ತಿಳಿಯಲು ಈ ಬರಹ ಸಹಾಯಕವಾಗಿದೆ. ಮೊದಲ ಭಾಗದಲ್ಲಿ ಪುರಾಣ ಪಾತ್ರಗಳ ಚಿತ್ರಗಳಿದ್ದರೆ, ಎರಡನೇ ಭಾಗದಲ್ಲಿ ಆಚಾರ್ಯರು ಪರಿಸರದೊಂದಿಗೆ ನಡೆಸಿದ ಅನುಸಂಧಾನದ ಕಲಾಕೃತಿಗಳನ್ನು ನೋಡಬಹುದು. ಮನುಷ್ಯ ಪ್ರಕೃತಿಯ ಅವಿಭಾಜ್ಯ ಭಾಗವಾಗಿದ್ದರೂ, ಪ್ರಕೃತಿಯನ್ನು ಮೀರುವುದು ಅವನಿಗೆಂದೂ ಸಾಧ್ಯವಿಲ್ಲ ಎನ್ನುವುದು ಆಚಾರ್ಯರ ಒಂದು ಮಾತು. ಅವರ ಕಲಾಕೃತಿಗಳು ಪ್ರಕೃತಿಯ ವಿರಾಟ್ ಸ್ವರೂಪವನ್ನು ಕಾಣಿಸುವಂತಿವೆ; ಅದೇ ಕಾಲಕ್ಕೆ ಅಸಾಧಾರಣ ಪ್ರತಿಭೆಯ ಕಲಾವಿದನೊಬ್ಬ ಪ್ರಕೃತಿಯ ಅಸಾಧಾರಣ ಭಾವ- ಬಣ್ಣಗಳನ್ನು ಕೈಗೆಟುಕಿಸಿಕೊಳ್ಳಲು ನಡೆಸಿದ ಹಂಬಲದಂತೆಯೂ ಈ ಕಲಾಕೃತಿಗಳನ್ನು ನೋಡಬಹುದು. ಪ್ರಕೃತಿಯ ಚಲನಶೀಲತೆ ಹಾಗೂ ಜೀವಂತಿಕೆಯನ್ನು ಆಚಾರ್ಯರ ಪ್ರಕೃತಿಚಿತ್ರಗಳಲ್ಲೂ ಕಾಣಬಹುದು.

ಕೊನೆಯ ಭಾಗದಲ್ಲಿ, ಆಚಾರ್ಯರ ರೇಖೆಗಳಲ್ಲಿ ಮೂಡಿದ ಹಿಂದೂ ದೇವ-ದೇವತೆಯರಿದ್ದಾರೆ. ಸರಳವಾದ ರೇಖೆಗಳಲ್ಲಿ ಮೂಡಿರುವ ಈ ಚಿತ್ರಗಳು




ದಿ ಡಿವೈನ್ ಆರ್ಟ್ ಆಫ್ ಎಂ.ಟಿ.ವಿ. ಆಚಾರ್ಯ
ಲೇ: ಶ್ರೀಧರ ತುಮರಿ
ಪು: 272; ಬೆ: ರೂ. 3995
ಪ್ರ: ಪ್ರಿಸಂ ಬುಕ್ಸ್, ಬೆಂಗಳೂರು.
ಫೋನ್: 80–43941009 /26714108